# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

# KARNATAKA ELECTRICITY REGULATORY COMMISSION

**6 ಮತ್ತು 7ನೇ ಮಹಡಿ, ಮಹಾಲಕ್ಷ್ಮೀ ಛೇಂಬರ್ಸ್**
**ನಂ. 9/2, ಎಂ.ಜಿ. ರಸ್ತೆ, ಬೆಂಗಳೂರು - 560 001**

6th & 7th Floor, Mahalaxmi Chambers
No. 9/2, M.G. Road, Bengaluru-560 001


ಸಂಖ್ಯೆ:ಕವಿನಿಆ/ಕಾರ್ಯದರ್ಶಿ/16-17/2571

ದಿನಾಂಕ: 9.02.2017

## <u>ಸಾರ್ವಜನಿಕ ವಿಚಾರಣೆಯ ಪ್ರಕಟಣೆ</u>

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಆರ್ಥಿಕ ವರ್ಷ 2015-16ನೇ ಸಾಲಿನ ವಾರ್ಷಿಕ ಕಾರ್ಯ ನಿರ್ವಹಣಾ ಪರಿಶೀಲನೆ (ಎ.ಪಿ.ಆರ್) ಮತ್ತು ತತ್ಪರಿಣಾಮವಾಗಿ ಆರ್ಥಿಕ ವರ್ಷ 2017-18ನೇ ಸಾಲಿನ ವಾರ್ಷಿಕ ಕಂದಾಯ ಅಗತ್ಯತೆ (ಎ.ಆರ್.ಆರ್.) ಹಾಗೂ ವಿದ್ಯುತ್ ಪ್ರಸರಣಾ ದರ ಪರಿಷ್ಕರಣೆ ಅರ್ಜಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅನುಮೋದನೆಗೆ ಸಲ್ಲಿಸಿದೆ. ಅದೇ ರೀತಿ ರಾಜ್ಯದಲ್ಲಿನ ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳು (ಬೆಸ್ಕಾಂ/ಸೆಸ್ಕ್/ಮೆಸ್ಕಾಂ/ಹೆಸ್ಕಾಂ/ಜೆಸ್ಕಾಂ/ಹುಕ್ಕೇರಿ ಆರ್.ಇ.ಸಿ.ಎಸ್.), ಮಂಗಳೂರು ವಿಶೇಷ ಆರ್ಥಿಕ ವಲಯ (ಎಸ್.ಇ.ಝಡ್) ಮತ್ತು AEQUS ಎಸ್.ಇ.ಝಡ್ ಆರ್ಥಿಕ ವರ್ಷ 2015-16ನೇ ಸಾಲಿನ ವಾರ್ಷಿಕ ಕಾರ್ಯ ನಿರ್ವಹಣಾ ಪರಿಶೀಲನೆ (ಎ.ಪಿ.ಆರ್), ಆರ್ಥಿಕ ವರ್ಷ 2017-18ನೇ ಸಾಲಿನ ವಾರ್ಷಿಕ ಕಂದಾಯ ಅಗತ್ಯತೆ (ಎ.ಆರ್.ಆರ್.) ಮತ್ತು ಆರ್ಥಿಕ ವರ್ಷ 2017-18ರ ವಿದ್ಯುತ್ ದರ ಪರಿಷ್ಕರಣೆಗೆ ಅನುಮೋದನೆ ಪಡೆಯಲು ಅರ್ಜಿಗಳನ್ನು ಆಯೋಗಕ್ಕೆ ಸಲ್ಲಿಸಿವೆ. ಸದರಿ ವಿದ್ಯುತ್ ಪ್ರಸರಣ ಮತ್ತು ಸರಬರಾಜು ಪರವಾನಿಗಿದಾರರು ತಮ್ಮ ಪ್ರಸ್ತಾವನೆಗಳ ಸಂಕ್ಷಿಪ್ತ ವಿವರಗಳನ್ನು ಈಗಾಗಲೇ ಪತ್ರಿಕೆಗಳಲ್ಲಿ ಪ್ರಕಟಿಸಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿವೆ. ಈ ಪ್ರಸ್ತಾವನೆಗಳ ವಿವರಗಳು ಸದರಿ ಕಂಪನಿಗಳ ವೆಬ್‌ಸೈಟ್ ಮತ್ತು ಆಯೋಗದ ವೆಬ್‌ಸೈಟ್ www.karnataka.gov.in/kercನಲ್ಲಿ ಲಭ್ಯವಿದೆ.

ಈ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯುವ ಸಲುವಾಗಿ ಹಾಗೂ ಆಸಕ್ತಿಯುಳ್ಳವರ ಸಲಹೆ/ಪ್ರತಿಕ್ರಿಯೆಗಳನ್ನು ಆಲಿಸಲು ಆಯೋಗವು ಈ ಕೆಳಗೆ ಸೂಚಿಸಿದಂತೆ **" ಸಾರ್ವಜನಿಕ ವಿಚಾರಣೆ"** ಯನ್ನು ಏರ್ಪಡಿಸಿದೆ.

| ಕ್ರ.ಸಂ. | ಕಂಪನಿಯ ಹೆಸರು | ದಿನಾಂಕ | ಸಮಯ | ಸ್ಥಳ |
|---|---|---|---|---|
| 1 | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಬೆಂಗಳೂರು. | 20.02.2017 ಸೋಮವಾರ | ಬೆಳಿಗ್ಗೆ 11.00 ಗಂಟೆ | ನ್ಯಾಯಾಂಗಣ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, 6ನೇ ಮಹಡಿ, ಮಹಾಲಕ್ಷ್ಮಿ ಚೇಂಬರ್ಸ್, 9/2, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು-01. |
| 2 | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು | 21.02.2017 ಮಂಗಳವಾರ | ಬೆಳಿಗ್ಗೆ 11.00 ಗಂಟೆ | |
| 3 | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು. | 22.02.2017 ಬುಧವಾರ | ಬೆಳಿಗ್ಗೆ 11.00 ಗಂಟೆ | ನ್ಯಾಯಾಂಗಣ, ಜಿಲ್ಲಾಧಿಕಾರಿಗಳ ಕಚೇರಿ, ಮೈಸೂರು |
| 4 | ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಮಂಗಳೂರು. | 27.02.2017 ಸೋಮವಾರ | ಬೆಳಿಗ್ಗೆ 11.00 ಗಂಟೆ | ನ್ಯಾಯಾಂಗಣ, ಜಿಲ್ಲಾಧಿಕಾರಿಗಳ ಕಚೇರಿ, ಮಂಗಳೂರು |
| 5 | ಮಂಗಳೂರು ಎಸ್.ಇ.ಝಡ್, ಮಂಗಳೂರು, | 27.02.2017 ಸೋಮವಾರ | ಮಧ್ಯಾಹ್ನ 3.30 ಗಂಟೆ | ನ್ಯಾಯಾಂಗಣ, ಜಿಲ್ಲಾಧಿಕಾರಿಗಳ ಕಚೇರಿ, ಮಂಗಳೂರು |
| 6 | ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ, | 01.03.2017 ಬುಧವಾರ | ಬೆಳಿಗ್ಗೆ 11.00 ಗಂಟೆ | ನ್ಯಾಯಾಂಗಣ, ಜಿಲ್ಲಾಧಿಕಾರಿಗಳ ಕಚೇರಿ, ಧಾರವಾಡ |
| 7 | ಹುಕ್ಕೇರಿ ಗ್ರಾಮೀಣ ವಿದ್ಯುತ್ ಕೋ-ಆಪರೇಟೀವ್ ಸೊಸೈಟಿ(HRECS) | 02.03.2017 ಗುರುವಾರ | ಬೆಳಿಗ್ಗೆ 10.30 ಗಂಟೆ | ಹುಕ್ಕೇರಿ ಗ್ರಾಮೀಣ ವಿದ್ಯುತ್ ಕೋ-ಆಪರೇಟೀವ್ ಸೊಸೈಟಿ (HRECS) ಕಛೇರಿಯಲ್ಲಿ |
| 8 | AEQUS ಎಸ್.ಇ.ಝಡ್, ಹುಕ್ಕೇರಿ ತಾಲ್ಲೂಕು | 02.03.2017 ಗುರುವಾರ | ಮಧ್ಯಾಹ್ನ 2.00 ಗಂಟೆ | AEQUS ಎಸ್.ಇ.ಝಡ್, ಹಟ್ಟರಗಿ ಗ್ರಾಮ, ಹುಕ್ಕೇರಿ ತಾಲ್ಲೂಕು ಕಛೇರಿಯಲ್ಲಿ |
| 9 | ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಕಲಬುರಗಿ, | 06.03.2017 ಸೋಮವಾರ | ಬೆಳಿಗ್ಗೆ 11.00 ಗಂಟೆ | ನ್ಯಾಯಾಂಗಣ, ಜಿಲ್ಲಾಧಿಕಾರಿಗಳ ಕಚೇರಿ, ಕಲಬುರಗಿ. |

ಆಸಕ್ತ ವ್ಯಕ್ತಿಗಳು "ಸಾರ್ವಜನಿಕ ವಿಚಾರಣೆ"ಯಲ್ಲಿ ಭಾಗವಹಿಸಿ, ತಮ್ಮ ಸಲಹೆಗಳನ್ನು ಮೌಖಿಕ / ಲಿಖಿತರೂಪದಲ್ಲಿ ಆಯೋಗಕ್ಕೆ ಸಲ್ಲಿಸಬಹುದಾಗಿದೆ.

ಕಾರ್ಯದರ್ಶಿ
ಕ.ವಿ.ನಿ.ಆ., ಬೆಂಗಳೂರು